# ಬುದ್ಧಿಜೀವಿಗಳ ದ್ವಂದ್ವ

## ದೈವದ ಕಲ್ಲಿನ ಮೇಲೆ ಮೂತ್ರ ಮಾಡಿದ್ದ, ಸಂಸ್ಕಾರದಲ್ಲಿ ಬ್ರಾಹ್ಮಣಧರ್ಮಗಳನ್ನು ಹೀನಾಯವಾಗಿ ಚಿತ್ರಿಸಿದ್ದ ಅನಂತಮೂರ್ತಿ, ಹರಿದ್ವಾರದಲ್ಲಿ ತಂದೆಯ ಶ್ರಾದ್ಧ ಮಾಡಿ ಕಾಶಿಯ ವಿಶ್ವನಾಥನಿಗೆ ಪೂಜೆ ಸಲ್ಲಿಸಿದ್ದರ ದಾಖಲೆ

"ನಾನು ಸಣ್ಣವನಿದ್ದಾಗಲೇ ದೈವದ ಮೇಲೆ ಮೂತ್ರ ಮಾಡಿದ್ದೆ" ಎನ್ನುವ ಅನಂತಮೂರ್ತಿಯವರ ಹೇಳಿಕೆಯನ್ನಿಟ್ಟುಕೊಂಡು ಕಲಬುರ್ಗಿಯವರು "ಹಿಂದೂ ದೇವರ ವಿಗ್ರಹಗಳ ಮೇಲೆ ಮೂತ್ರ ಮಾಡಿದರೂ ಏನೂ ಆಗೋಲ್ಲ. ಕಾಡುವ ಕಾಪಾಡುವ ಶಕ್ತಿ ಅದರಲಿಲ್ಲ, ಇದರಿಂದ ತಪ್ಪೇನೂ ಆಗಲ್ಲ, ಪೂಜೆ ನಿಲ್ಲಿಸಿದ್ರೆ ಅಪಾಯವಿಲ್ಲ. ಅದು ಕೇವಲ ಕಲ್ಲಿನಿಂದ ರಚನೆಯಾದ ಕಾರಣ ಅದರಲ್ಲಿ ಕಾಪಾಡುವ, ಕಾಡುವ ಶಕ್ತಿಯೂ ಇಲ್ಲ ಎಂಬುದು ಯುಆರ್ ಅನಂತಮೂರ್ತಿ ಅವರ ಪ್ರಯೋಗದಿಂದ

ಸಾಬೀತಾಗಿದೆ" ಎಂದು ವಿವಾದ ಹುಟ್ಟು ಹಾಕಿದ್ದು ನಿಮಗೆಲ್ಲ ತಿಳಿದಿದೆ.

ಸಂಸ್ಕೃತದಲ್ಲಿ ಒಂದು ಮಾತಿದೆ —

> **"ಕರ್ಮಣ್ಯೇಕಂ ವಚಸ್ಯೈಕಂ**
> **ಮನಸ್ಯೇಕಂ ಮಹಾತ್ಮನಾಮ್ ।**
> **ಕರ್ಮಣ್ಯನ್ಯದ್ ವಚಸ್ಯನ್ಯದ್**
> **ಮನಸ್ಯನ್ಯದ್ ದುರಾತ್ಮನಾಮ್"**

ಮಾತು-ಮನಸ್ಸು-ಕೃತಿಯಲ್ಲಿ ಏಕತೆ ತಾಳುವವನು ಮಹಾತ್ಮ.

ಮಾತಲ್ಲೊಂದು, ಮನಸ್ಸಲ್ಲೊಂದು ಕೃತಿಯಲ್ಲೊಂದು ಮಾಡುವವ ದುರಾತ್ಮ ಎಂದು ಅದರ ಅರ್ಥ.

"ಮೂರ್ತಿ ಪೂಜೆ ಮೂರ್ಖತನ"
"ದೇವರ ಪ್ರತಿಮೆ ಒಂದು ಕಲ್ಲು, ಅದರಲ್ಲಿ ದೇವರಿರುವದಿಲ್ಲ,"
"ವಸ್ತುಸ್ಥಿತಿಯಲ್ಲಿ ದೇವರೇ ಇಲ್ಲ,"
"ಶ್ರಾದ್ಧ, ಪೂಜೆ ಎಲ್ಲವೂ ಪುರೋಹಿತರು ದುಡ್ಡು ಮಾಡುವ ತಂತ್ರಗಳು" ಇವೇ

ಗೊತ್ತಿಲ್ಲದ ಕಾಲದಿಂದಲೂ ಇರುವ ನಾಸ್ತಿಕರ ಬಡಾಯಿಗಳು.

ಜನರ ಮುಂದೆ ಬಂದು ಪ್ರಚಾರಕ್ಕಾಗಿ ಹೀಗೆ ಮಾತನಾಡುವ ಮಂದಿ ಮಾತ್ರ ಮನೆಯಲ್ಲಿ ತನ್ನ ಜೀವನದಲ್ಲಿ  ನಾಸ್ತಿಕತೆಯನ್ನು ತರುವ ಧೈರ್ಯವನ್ನು ತೋರಿರುವದಿಲ್ಲ.

ತಾನು ಮಹಾನಾಸ್ತಿಕ ಎಂದು ಉದ್ಘೋಷಿಸುವ ವ್ಯಕ್ತಿ ಮನೆಯಲ್ಲಿ ಗೌರೀ ಗಣೇಶದ ಸಂಭ್ರಮ ನಡೆಯುತ್ತಿದ್ದರೆ ನನ್ನ ಹೆಂಡತಿ ಮಕ್ಕಳ ಮೇಲೆ ನನ್ನ ವೈಚಾರಿಕತೆಯನ್ನು ಹೇರುವದಿಲ್ಲ ಅಂತ ಬರೆಯುತ್ತಾನೆ. ನನ್ನ ಪ್ರಶ್ನೆ — ತನ್ನ ಹೆಂಡತಿಯನ್ನೇ ತಿದ್ದಲಾಗದವನು ಊರನ್ನೇಕೆ ತಿದ್ದಲು ಬಂದ?

ತನ್ನ ಮನೆಯಲ್ಲಿ ಗೌರೀ ಗಣೇಶ ನಡೆಯಬಹುದು. ಊರವರು ಮಾತ್ರ ನಾಸ್ತಿಕರಾಗಬೇಕು. ಇದು ನಾಸ್ತಿಕರ ನಿಲುವು.

ಇವತ್ತಿನ ಬಹುತೇಕ ಬುದ್ಧಿ ಇಲ್ಲದ ಜೀವಿಗಳ ಮನೆ ವಾಸ್ತುಪ್ರಕಾರವಾಗಿಯೇ ಕಟ್ಟಲ್ಪಟ್ಟಿವೆ.  ದೇವರಿಲ್ಲ, ಧರ್ಮ ಸುಳ್ಳು ಎಂದು ಭಾಷಣ ಬಿಗಿದು ಸಮಾಜದ

ಮಧ್ಯದಲ್ಲಿ ಬೆಂಕಿ ಹೊತ್ತಿಸುವ ಮಂದಿ ಧರ್ಮ-ವಾಸ್ತು-ದೇವರ ವಿಷಯ ಬಂದಾಗ ಹೆಂಡತಿಯ, ಸೆರಗಿನಡಿ ಬಚ್ಚಿಟ್ಟುಕೊಂಡು ಬಿಡುತ್ತಾರೆ. ನನ್ನ ಹೆಂಡತಿಗೆ ಇಷ್ಟ, ನನ್ನ ಹೆಂಡತಿಗೆ ಅದರಲ್ಲಿ ನಂಬಿಕೆ ಅದಕ್ಕಾಗಿ ನಾನು ಅದರಲ್ಲಿ ತಲೆ ಹಾಕುವದಿಲ್ಲ. ಹೆಂಡತಿಯ ಮುಂದೆ ತನ್ನ ವಾದವನ್ನು ಮಂಡಿಸಲಿಕ್ಕಾಗದ ಹೇಡಿ ಮೈಕು ಹಿಡಿದು ಮಾತನಾಡಿ ಸಮಾಜದ ಶಾಂತಿಯನ್ನು ಕದಡುತ್ತಾನೆ! ವಾಕರಿಕೆ ಬರಿಸುವ ಪ್ರವೃತ್ತಿ.

ಅನಂತಮೂರ್ತಿ ದೈವದ ಕಲ್ಲಿನ ಮೇಲೆ ಮೂತ್ರ ಮಾಡಿದ ಸುದ್ಧಿ ನಿಮಗೆಲ್ಲರಿಗೂ ತಿಳಿದದ್ದೆ. ಅದರಿಂದುಂಟಾದ ವಿವಾದದ ಬಗ್ಗೆಯೂ ತಿಳಿದದ್ದೆ.

ಈಗ ತುಷಾರದಲ್ಲಿ ಅನಂತಮೂರ್ತಿಯ ಹೆಂಡತಿ ಎಸ್ತರ್ ತನ್ನ ಗಂಡನೊಡಗಿನ ನೆನಪುಗಳನ್ನು ಹೆಕ್ಕಿ ಬರೆಯುತ್ತಿದ್ದಾರೆ. 2016 ರ ಫೆಬ್ರುವರಿ ತುಷಾರದಲ್ಲಿ ಪ್ರಕಟವಾಗಿರುವ “ನೆನಪು ಅನಂತ” ದ 13ನೆಯ ಭಾಗದಲ್ಲಿ ಎರಡು ಪ್ಯಾರಾಗ್ರಾಫ್ ಗಳು ಅನಂತಮೂರ್ತಿಯ ದ್ವಂದ್ವನಿಲುವನ್ನು ಸಾಬೀತು ಪಡಿಸುತ್ತವೆ. ಓದಿ. (ನಾನು ತಿರುಚಿ

ಬರೆದಿರಬಹುದು ಎಂಬ ಸಂಶಯ ಬಾರದಿರಲಿ ಎಂದು ಆ ಭಾಗದ scanned copy ಗಳನ್ನು ಹಾಕಿದ್ದೇನೆ.)

## ‘ಸಂಸ್ಕಾರ’ ಕಾದಂಬರಿಯಲ್ಲಿ ಬ್ರಾಹ್ಮಣಧರ್ಮಗಳನ್ನು ಅವಹೇಳನ ಮಾಡಿದ್ದ ಅನಂತಮೂರ್ತಿ ಹರಿದ್ವಾರದಲ್ಲಿ ಕಷ್ಟಪಟ್ಟು ತನ್ನ ತಂದೆಯ ಶ್ರಾದ್ಧ ಮಾಡಿದ ದಾಖಲೆ.


ದೆಹಲಿಯಲ್ಲಿರುವಾಗ ಒಮ್ಮೆ ಹರಿದ್ವಾರಕ್ಕೆ ಹೋಗಿದ್ದೆವು. ಗಂಗೆ ಪ್ರಶಾಂತವಾಗಿ ಹರಿಯುತ್ತಿದ್ದಳು. ಎಂಥವರೂ ನೋಡಿ ಭಾವುಕರಾಗಬೇಕು. ಅಂದು ಬುದ್ಧಪೂರ್ಣಿಮೆ. ಅನಂತಮೂರ್ತಿ ತನ್ನ ಹಿರಿಯರನ್ನು ಸ್ಮರಿಸಿಕೊಳ್ಳುವ ಸಲುವಾಗಿ ಗಂಗಾತೀರದಲ್ಲಿ ಪಿತೃಶ್ರಾದ್ಧವನ್ನು ನೆರವೇರಿಸುವ ಯೋಚನೆ ಮಾಡಿದರು. ಪುರೋಹಿತರನ್ನು ನಿಗದಿಗೊಳಿಸಿದ್ದಾಯಿತು. ಇನ್ನೇನು ಕರ್ಮವಿಧಿಗಳು ಆರಂಭವಾಗಬೇಕು ಎನ್ನುವಾಗ ಅನಂತಮೂರ್ತಿಯವರ ಬೆನ್ನು ಹಿಡಿದುಕೊಂಡಿತು! ವಿಪರೀತ ಬೆನ್ನು ನೋವಿನಿಂದ ಕದಲಲಾಗದ ಸ್ಥಿತಿ ಉಂಟಾಯಿತು. ಆಗ ನಾನೇ ಅವರ ಪರವಾಗಿ ಗಂಗೆಯಿಂದ ನೀರು ತರಬೇಕಾಯಿತು. ವಿಪರೀತ ಚಳಿ. ನಮ್ಮ ಜೊತೆಗಿದ್ದ ಗೆಳೆಯರು ನೀರಿನಲ್ಲಿ ಮುಳುಗಲು ಹಿಂದೇಟು ಹಾಕಿದರು. ನಾನು ಪವಿತ್ರವಾದ ಗಂಗೆಯಲ್ಲಿ ಮುಳುಗಿ ಕೊಡದಲ್ಲಿ ಜಲವನ್ನು ತಂದು ಮಾವನ ನೆನಪಿನಲ್ಲಿ ಪಿತೃಶ್ರಾದ್ಧ ನಡೆಸಲು ಸಹಕರಿಸಿದೆ. ನಾನೇ ಅನಂತಮೂರ್ತಿಯ ಬಳಿ ಕುಳಿತು ವೈದಿಕಾದಿಗಳನ್ನು ಮಾಡಿದೆ. ‘ನನ್ನ ಹೆಂಡತಿ ಕ್ರಿಶ್ಚಿಯನ್ನು. ವಿಧಿಗಳನ್ನು ನೆರವೇರಿಸುವುದರಲ್ಲಿ ಅಡ್ಡಿಯಿಲ್ಲವೆ?’ ಎಂದು ಅನಂತಮೂರ್ತಿ ಸುಮ್ಮನೆ ಮೊದಲೇ ಕೇಳಿದ್ದರು. ‘ಹೋ ಏನೂ ತೊಂದರೆಯಿಲ್ಲ’ ಎಂದರು ಪುರೋಹಿತರು. ನನ್ನ ಪಾಲಿಗೆ ಇದೊಂದು ವಿಶಿಷ್ಟ ಅನುಭವ.

“ದೆಹಲಿಯಲ್ಲಿರುವಾಗ ಒಮ್ಮೆ ಹರಿದ್ವಾರಕ್ಕೆ ಹೋಗಿದ್ದೆವು. ಗಂಗೆ ಪ್ರಶಾಂತವಾಗಿ ಹರಿಯುತ್ತಿದ್ದಳು. ಎಂಥವರೂ ನೋಡಿ ಭಾವುಕರಾಗಬೇಕು. ಅಂದು ಬುದ್ಧಪೂರ್ಣಿಮೆ. ಅನಂತಮೂರ್ತಿ ತನ್ನ ಹಿರಿಯರನ್ನು

ಸ್ಮರಿಸಿಕೊಳ್ಳುವ ಸಲುವಾಗಿ ಗಂಗಾತೀರದಲ್ಲಿ ಪಿತೃಶ್ರಾದ್ಧವನ್ನು ನೆರವೇರಿಸುವ ಯೋಚನೆ ಮಾಡಿದರು. ಪುರೋಹಿತರನ್ನು ನಿಗದಿಗೊಳಿಸಿದ್ದಾಯಿತು. ಇನ್ನೇನು ಕರ್ಮವಿಧಿಗಳು ಆರಂಭವಾಗಬೇಕು ಎನ್ನುವಾಗ ಅನಂತಮೂರ್ತಿಯವರ ಬೆನ್ನು ಹಿಡಿದುಕೊಂಡಿತು! ವಿಪರೀತ ಬೆನ್ನು ನೋವಿನಿಂದ ಕದಲಲಾಗದ ಸ್ಥಿತಿ ಉಂಟಾಯಿತು. ಆಗ ನಾನೇ ಅವರ ಪರವಾಗಿ ಗಂಗೆಯಿಂದ ನೀರು ತರಬೇಕಾಯಿತು. ವಿಪರೀತ ಚಳಿ. ನಮ್ಮ ಜೊತೆಗಿದ್ದ ಗೆಳೆಯರು ನೀರಿನಲ್ಲಿ ಮುಳುಗಲು ಹಿಂದೇಟು ಹಾಕಿದರು. ನಾನು ಪವಿತ್ರವಾದ ಗಂಗೆಯಲ್ಲಿ ಮುಳುಗಿ ಕೊಡದಲ್ಲಿ ಜಲವನ್ನು ತಂದು ಮಾವನ ನೆನಪಿನಲ್ಲಿ ಪಿತೃಶ್ರಾದ್ಧವನ್ನು ನಡೆಸಲು ಸಹಕರಿಸಿದೆ. ನಾನೇ ಅನಂತಮೂರ್ತಿಯವರ ಬಳಿ ಕುಳಿತು ವೈದಿಕಾದಿಗಳನ್ನು ಮಾಡಿದೆ. 'ನನ್ನ ಹೆಂಡತಿ ಕ್ರಿಶ್ಚಿಯನ್ನು. ವಿಧಿಗಳನ್ನು ನೆರವೇರಿಸುವದರಲ್ಲಿ ಅಡ್ಡಿಯಿಲ್ಲವೇ?' ಎಂದು ಅನಂತಮೂರ್ತಿ ಸುಮ್ಮನೇ ಮೊದಲೇ ಕೇಳಿದ್ದರು. 'ಹೋ ಏನೂ

ತೊಂದರೆಯಿಲ್ಲ' ಎಂದರು ಪುರೋಹಿತರು. ನನ್ನ ಪಾಲಿಗೆ ಇದೊಂದು ವಿಶಿಷ್ಟ ಅನುಭವ"

## ದೈವದ ಕಲ್ಲಿನ ಮೇಲೆ ಮೂತ್ರ ಮಾಡಿದ ವ್ಯಕ್ತಿ ಕಾಶಿಯಲ್ಲಿರುವ ವಿಶ್ವನಾಥ ಎಂಬ ಹೆಸರಿನ ಕಲ್ಲಿಗೆ ಪೂಜೆ ಸಲ್ಲಿಸಿದ್ದರ ದಾಖಲೆ.



ತುಷಾರ ಫೆಬ್ರವರಿ 2016

ಸಂಬಂಧವಿತ್ತು ಎಂಬುದನ್ನು ತಿಳಿದು ತಮ್ಮ ಹಿರಿಯರ ಸ್ಮರಣೆಯಲ್ಲಿ ಆ ದೇವಸ್ಥಾನವನ್ನು ಸಂದರ್ಶಿಸಿದರು. ನಮ್ಮನ್ನೂ ಜೊತೆಗೆ ಕರೆದೊಯ್ದರು. ನಾವೆಲ್ಲರೂ ವಿಷ್ಣುಮೂರ್ತಿಗೆ ಪೂಜೆ ಸಲ್ಲಿಸಿ ಬಂದೆವು.

ಕೆಲವು ವರ್ಷಗಳ ಹಿಂದೆ ನನ್ನ ಮೊಮ್ಮಗಳು ವನ್ಯಾಳ ಹುಟ್ಟುಹಬ್ಬ ಸಮಾರಂಭವನ್ನು ಅದೇ ದೇವಸ್ಥಾನದಲ್ಲಿ ಏರ್ಪಡಿಸಿದ್ದೆವು. ಅನಂತಮೂರ್ತಿ ತೀರಿಕೊಂಡ ಬಳಿಕವೂ ಒಮ್ಮೆ ಆ ದೇವಸ್ಥಾನಕ್ಕೆ ಹೋಗಿ ಬಂದಿದ್ದೇವೆ.

ಮಧ್ಯೆ ಒಂದು ಘಟನೆಯನ್ನು ಇಲ್ಲಿಯೇ ಹೇಳಿಬಿಡುತ್ತೇನೆ. ಅನಂತಮೂರ್ತಿಗೆ ತಮ್ಮ ತಾಯಿಯನ್ನು ಕಾಶಿಗೆ ಕರೆದೊಯ್ಯಬೇಕು, ವಿಶ್ವನಾಥನ ದರ್ಶನ ಮಾಡಿಸಬೇಕೆಂದು ತುಂಬ ಆಸೆಯಿತ್ತು. ಆದರೆ, ಅದಕ್ಕೆ ಅನುಕೂಲವಾದ ಸ್ಥಿತಿ ಒದಗಿ ಬರಲೇ ಇಲ್ಲ. ಹಿರಿಹರೆಯದ ಅತ್ತೆಯವರು ಪ್ರಯಾಣ ಮಾಡುವ ಸ್ಥಿತಿಯಲ್ಲಿಯೂ ಇರಲಿಲ್ಲ. ಕೊಟ್ಟಾಯಂ ವಿಶ್ವವಿದ್ಯಾನಿಲಯದಲ್ಲಿರುವಾಗ ಇರಬೇಕು, ಅನಂತಮೂರ್ತಿಗೆ ಬನಾರಸ್‌ಗೆ ಹೋಗುವ ಅವಕಾಶ ಸಿಕ್ಕಿತು. ನಾನೂ ಜೊತೆಗಿದ್ದೆ. 'ಅಮ್ಮನ ಹೆಸರಿನಲ್ಲಿ ವಿಶ್ವನಾಥನಿಗೆ ಪೂಜೆ ಸಲ್ಲಿಸೋಣವೆ?' ಎಂದರು ಅನಂತಮೂರ್ತಿ. ನಾನು ಅತ್ತೆಯವರನ್ನು ನೆನೆಯುತ್ತ ಪೂಜೆಯಲ್ಲಿ ಭಾಗವಹಿಸಿದೆ. ದೇವಸ್ಥಾನದಿಂದ ಹೊರಗೆ ಬಂದ ಮೇಲೆ ನನ್ನಲ್ಲಿದ್ದ ಪೋಸ್ಟ್ ಕಾರ್ಡಿನಲ್ಲಿ, 'ನಿಮ್ಮನ್ನು ನೆನೆದು, ನಿಮ್ಮ ಹೆಸರಿನಲ್ಲಿ ಕಾಶಿಯ ದೇವರಿಗೆ ಪೂಜೆ ಸಲ್ಲಿಸಿದೆ' ಎಂದು ಅತ್ತೆಯವರಿಗೆ ಬರೆದು ಅಲ್ಲಿಯೇ ಅಂಚೆಪೆಟ್ಟಿಗೆಯಲ್ಲಿ ಹಾಕಿದೆ. ಅದನ್ನು ಓದಿ ಅತ್ತೆಗೆ ತುಂಬ ಸಂತೋಷವಾಯಿತಂತೆ.

"ಅನಂತಮೂರ್ತಿಗೆ ತಮ್ಮ ತಾಯಿಯನ್ನು ಕಾಶಿಗೆ ಕರೆದೊಯ್ಯಬೇಕು, ವಿಶ್ವನಾಥನ ದರ್ಶನ ಮಾಡಿಸಬೇಕೆಂದು ತುಂಬ ಆಸೆಯಿತ್ತು. ಆದರೆ, ಅದಕ್ಕೆ ಅನುಕೂಲವಾದ ಸ್ಥಿತಿ ಒದಗಿ ಬರಲೇ ಇಲ್ಲ. ಹಿರಿಹರೆಯದ ಅತ್ತೆಯವರು ಪ್ರಯಾಣ ಮಾಡುವ ಸ್ಥಿತಿಯಲ್ಲಿಯೂ ಇರಲಿಲ್ಲ. ಕೊಟ್ಟಾಯಂ

ವಿಶ್ವವಿದ್ಯಾಲಯದಲ್ಲಿರುವಾಗ ಇರಬೇಕು, ಅನಂತಮೂರ್ತಿಗೆ ಬನಾರಸ್ ಗೆ ಹೋಗುವ ಅವಕಾಶ ಸಿಕ್ಕಿತು. ನಾನೂ ಜೊತೆಗಿದ್ದೆ. 'ಅಮ್ಮನ ಹೆಸರಿನಲ್ಲಿ ವಿಶ್ವನಾಥನಿಗೆ ಪೂಜೆ ಸಲ್ಲಿಸೋಣವೇ?' ಎಂದರು ಅನಂತಮೂರ್ತಿ. ನಾನು ಅತ್ತೆಯವರನ್ನು ನೆನೆಯುತ್ತ ಪೂಜೆಯಲ್ಲಿ ಭಾಗವಹಿಸಿದೆ."

ಹೀಗೆ ಎಸ್ತರ್ ತನ್ನ ಗಂಡನ ದ್ವಂದ್ವಜೀವನವನ್ನು ಬಯಲು ಮಾಡಿದ್ದಾರೆ.

ದೈವದ ಕಲ್ಲಿನ ಮೇಲೆ ಸಣ್ಣವನಿದ್ದಾಗಲೇ ಮೂತ್ರ ಮಾಡಿದ್ದ ಮೂರ್ತಿಗೆ ಈಗ ತನ್ನ ಹದಿಹರೆಯದ ಪಕ್ವಬುದ್ಧಿಯ ವಯಸ್ಸಿನಲ್ಲಿ ಕಾಶಿಯಲ್ಲಿರುವದೂ ಕಲ್ಲು ಎನ್ನುವದು ಗೊತ್ತಾಗಲಿಲ್ಲವೇ? ಯಾವ ಭೂತದ ಕಲ್ಲಿನ ಮೇಲೆ ಮೂತ್ರ ಮಾಡಿದ್ದರೋ ಆ ಭೂತದ ಗಣಗಳಿಗೆ ನಾಥನಾದ ಭೂತನಾಥ ಇವರಿಗೆ ಕಲ್ಲಾಗಲಿಲ್ಲವೋ? ಕಾಶಿಯ ವಿಶ್ವನಾಥನ ಪೂಜೆ ಸಲ್ಲಿಸಲು ತಾಯಿಯ ಸೆರಗಿನ ಆಸರೆ ಬೇಕು. ಸಮಾಜದ ಮಧ್ಯದಲ್ಲಿ ಬೆಂಕಿ ಹೊತ್ತಿಸಲು ಮಾತ್ರ ದೇವರಿಲ್ಲ ಧರ್ಮವಿಲ್ಲ ಎನ್ನುವ ಅರ್ಥಹೀನ ಪ್ರಲಾಪಗಳು.

ಜ್ಞಾನಪೀಠದ ಪ್ರಶಸ್ತಿಯನ್ನು ಪಡೆದ ಅನಂತಮೂರ್ತಿಗೆ ತನ್ನ ತಾಯಿಯನ್ನು ಕನ್ವಿನ್ಸ್ ಮಾಡುವಷ್ಟು ಬುದ್ಧಿ ಇರಲಿಲ್ಲವೇ? ಅದು ಕಲ್ಲಮ್ಮಾ, ದೇವರಲ್ಲ ಎಂದು ಹೇಳಲು ಸಾಧ್ಯವಿರಲಿಲ್ಲವೇ?

ಸಂಸ್ಕಾರದಲ್ಲಿ ಅತೀ ಹೀನಾಯವಾಗಿ ಬ್ರಾಹ್ಮಣಧರ್ಮಗಳನ್ನು ನಿಂದಿಸಿದ, ಕಾದಂಬರಿಯ ಓಘಕ್ಕೆ ಸಂಬಂಧವೇ ಇಲ್ಲದಿದ್ದರೂ ಸಾಧು ಪ್ರಾಣೇಶಾಚಾರ್ಯರನ್ನು ಚಂದ್ರಿಯ ಜೊತೆಯಲ್ಲಿ ಮಲಗಿಸಿ ವಿಕೃತ ಆನಂದವನ್ನು ಅನುಭವಿಸಿದ ಅನಂತಮೂರ್ತಿ ಬೆನ್ನು ಹಿಡಿದುಕೊಂಡಿದ್ದರೂ ತಂದೆಯ ಶ್ರಾದ್ಧವನ್ನು ಮಾಡಿದ್ದೇಕೆ?

ಎರಡೂ ಪ್ರಶ್ನೆಗಳಿಗೆ ಉತ್ತರ ಒಂದೇ. ಇವರು ಹೇಳುವದೊಂದು, ಮಾಡುವದೊಂದು.

ಯಾವುದನ್ನು ವೈಚಾರಿಕತೆ ಎಂದು ಸಮಾಜದ ಮಧ್ಯದಲ್ಲಿ ಬಿಂಬಿಸಿ ವೈಭವೀಕರಿಸಿರುತ್ತಾರೆಯೋ ಆ ವೈಚಾರಿಕತೆಯ ಅನುಷ್ಠಾನವನ್ನು ಆ ವ್ಯಕ್ತಿಯೇ ಮಾಡಿರುವದಿಲ್ಲ. ಮಾಡಲು ಸಾಧ್ಯವಾಗುವದಿಲ್ಲ. ಕಾರಣ ಆ ವೈಚಾರಿಕತೆಗೆ ಬುಡಪಾಯವೇ

ಇರುವದಿಲ್ಲ. ಸುಳ್ಳಿನ ಪಂಚಾಂಗದ ಮೇಲೆ ಕಟ್ಟಿದ ಸೌಧ ನಿಲ್ಲಲು ಸಾಧ್ಯವೇ?

**ಸಮಾಜದ ಮುಂದೆ ನಮ್ಮ ಸನಾತನ ವೈದಿಕ ಧರ್ಮವನ್ನು ಯಾರು ತುಳಿಯಲು ಪ್ರಯತ್ನಿಸುತ್ತಾರೆಯೋ ಅವರನ್ನೇ ಆವರಿಸಿ ನಮ್ಮ ವೈದಿಕ ಧರ್ಮದ ವಿಜಯಪತಾಕೆ ಹಾರಾಡುತ್ತದೆ ಎನ್ನುವದಕ್ಕೆ ಈ ಅನಂತಮೂರ್ತಿ ಜ್ವಲಂತ ಸಾಕ್ಷಿ.**

ನೀವು ಹೋಗಿ ಪತ್ತೆ ಮಾಡಿ ನೋಡಿ.  ಅನೇಕ ಬುದ್ಧಿಜೀವಿಗಳ ಮನೆ ವಾಸ್ತುಪ್ರಕಾರವಾಗಿ ಕಟ್ಟಲ್ಪಟ್ಟಿರುತ್ತವೆ. ಮೂಢನಂಬಿಕೆಯನ್ನು ನಿಷೇಧ ಮಾಡುವ ಮುಖ್ಯಮಂತ್ರಿಯ ಮನೆಯ ಗೃಹಪ್ರವೇಶವನ್ನು ನೆರವೇರಿಸಲು ಪುರೋಹಿತರ ದಂಡೇ ಬೇಕು. ಸದಾ ಬ್ರಾಹ್ಮಣರನ್ನು ಬಯ್ಯುವ ಮಂತ್ರಿಗೆ ಕೆಮ್ಮುಬಂದರೂ ಶಾಂತಿ ಮಾಡಿಸಲು ಬ್ರಾಹ್ಮಣರು ಬೇಕು. ತಮ್ಮ ಮನೆಯಲ್ಲಿ ಶ್ರಾದ್ಧ ದೇವರ ಪೂಜೆಗಳು ನಿರಂತರವಾಗಿ ನಡೆಯುತ್ತಿರಬೇಕು. ಆದರೆ ಸಮಾಜದ ಮುಂದೆ ಬಂದಾಗ ಮಾತ್ರ ಢೋಂಗಿ ನಾಸ್ತಿಕತನ.

ಅಂದಿನಿಂದ ಇಂದಿನಿಂದವರೆಗೆ ಆಗಿ ಹೋದ ನಾಸ್ತಿಕರ ಹಣೆಬರೆಹವೇ ಇಷ್ಟು. ಹತ್ತುಸಾವಿರ ವರ್ಷ ತಪಸ್ಸು ಮಾಡಿ ಬ್ರಹ್ಮದೇವರನ್ನು ಪೂಜಿಸಿದ ಹಿರಿಣ್ಯಕಶಿಪುವೂ ಸಹ ವರ ಬಂದ ತಕ್ಷಣ ಹೇಳಿದ್ದ — "ಕ್ವ ಮದನ್ಯೋ ಜಗದೀಶ್ವರಃ" ನಾನಲ್ಲದೇ ಇನ್ನ್ಯಾರು ದೇವರು ಎಂದು? ವರಕೊಟ್ಟ ಬ್ರಹ್ಮದೇವರು ಅವನಿಗಿಂತ ದೊಡ್ಡವರು ಎನ್ನುವದನ್ನು ಮರೆತೇ ಹೋಗಿದ್ದ ಅವನು.

ಇಂದಿನ ಢೋಂಗಿ ಬುದ್ಧಿಜೀವಿಗಳು ಲೇಖನಿ ಹಿಡಿದರೆ, ಮೈಕಿನ ಮುಂದೆ ನಿಂತರೆ ಮಹಾವೀರರು. ಮನೆಯವರ ಮುಂದೆ ಮಾತ್ರ ಬಾಲ ಮುದುಡಿದ ಪ್ರಾಣಿಗಳು. ಬಾಲ ಬಿಚ್ಚದ ಪ್ರಾಣಿಗಳು.

ವಿಶ್ವನಾಥನ ದರ್ಶನ ಪೂಜೆ ಮಾಡುವದಕ್ಕೆ ಅನಂತಮೂರ್ತಿ ತಾಯಿಯ ಸೆರಗು ಹಿಡಿದಿದ್ದಾರೆ ಅಷ್ಟೆ. ಗೌರೀಹಬ್ಬದ ಹೋಳಿಗೆ ತಿನ್ನಲು, ಗಣೇಶನ ಹಬ್ಬದ ಕಡುಬು ಸವಿಯಲು ಇನ್ನು ಕೆಲವರು ಹೆಂಡತಿಯ ಸೆರಗಿನ ಹಿಂದೆ ಮರೆಯಾಗುತ್ತಾರೆ.

ನಾಸ್ತಿಕನಾದರೆ ಪೂರ್ಣಾಂಗ ನಾಸ್ತಿಕನಾಗಬೇಕು. ಆಸ್ತಿಕನಾದರೆ ಪೂರ್ಣಾಂಗ ಆಸ್ತಿಕನಾಗಬೇಕು. ನಮ್ಮ ಡೀವೀಜಿ ಹೇಳುವಂತೆ ಅತ್ತಲೂ ಇಲ್ಲದೆ ಇತ್ತಲೂ ಇಲ್ಲದೆ ಸಿಂಬಳದ ನೊಣವಾಗಬಾರದು.

**“ನಂಬಿದನು ಪ್ರಹ್ಲಾದ ನಂಬದಿರ್ದನು ತಂದೆ**
**ನಂಬದೆಯು ನಂಬದಿರುವಿಬ್ಬಂದಿ ನೀನು I**
**ಕಂಬದಿನೋ ಬಿಂಬದಿನೋ ಮೋಕ್ಷಮವರಿಂಗಾಯ್ತು**
**ಸಿಂಬಳದ ನೊಣ ನೀನು ಮಂಕುತಿಮ್ಮ”**

ಅಂದಹಾಗೆ ಅನಂತಮೂರ್ತಿ ಬರೆದ ಸಂಸ್ಕಾರದ ತಿರುಳು ನಿಮಗೆಲ್ಲ ಗೊತ್ತು. ಬ್ರಾಹ್ಮಣಧರ್ಮದ ಆಚರಣೆಯನ್ನು ಬಿಟ್ಟು ಪತಿತನಾಗಿ ಹೋಗಿದ್ದ ವ್ಯಕ್ತಿಗೆ ಹೇಗೆ ಸಂಸ್ಕಾರ ಮಾಡುವದು ಎಂದು ಕಾಶಿಯಲ್ಲಿ ಅಧ್ಯಯನ ಮಾಡಿ ಬಂದ ಪ್ರಾಣೇಶಾಚಾರ್ಯರಿಂದ ಹಿಡಿದು ಮಠದ ಸ್ವಾಮಿಗಳವರೆಗೆ ತಲೆಕೆಡಿಸಿಕೊಳ್ಳುವದನ್ನು ನಿರೂಪಿಸುವ ಕಾದಂಬರಿ.  ವಿಚಿತ್ರ ಎಂದರೆ ಆ ವಿಷಯ ಆಚಾರಶೀಲ ಬ್ರಾಹ್ಮಣರ ಮನೆಯ ಮಡಿಹೆಂಗಸರಿಗೂ ಗೊತ್ತಿರುತ್ತದೆ. ಹೆಣವನ್ನು ಬಹಳ ಹೊತ್ತು ಇಟ್ಟುಕೊಳ್ಳಬಾರದು. ಒಂದು ರಾತ್ರಿ

ಇಟ್ಟು ತಂಗಳು ಮಾಡಲೇಬಾರದು. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಸಂಸ್ಕಾರ ಮಾಡಿಬಿಡಬೇಕು. ರಾತ್ರಿಯ ಹೊತ್ತು ಸಂಸ್ಕಾರ ಮಾಡುವ ಪ್ರಸಕ್ತಿ ಬಂದರೆ, ಮತ್ತು ಅನಂತಮೂರ್ತಿಯ ಪಾತ್ರದಂತಹ ವ್ಯಕ್ತಿಯನ್ನು ಸಂಸ್ಕಾರ ಮಾಡುವ ಪ್ರಸಕ್ತಿ ಬಂದರೆ ಹೆಣವನ್ನು ಮರದ ಕೊರಡಿನಂತೆ ಸುಟ್ಟು ಹಾಕಿ ಬರಬೇಕು. ಮಂತ್ರ, ವಿಧಿ ಮತ್ತೇನೂ ಇರುವದಿಲ್ಲ. ಉತ್ತಮ ವ್ಯಕ್ತಿ ಸತ್ತಿದ್ದರೆ ಮಂತ್ರ-ತಂತ್ರಗಳನ್ನೆಲ್ಲ ಮಾರನೆಯ ದಿವಸ ಮಾಡಬೇಕು. ಅನಂತಮೂರ್ತಿಯ ಪಾತ್ರದಂತಹ ವ್ಯಕ್ತಿ ಸತ್ತಿದ್ದರೆ ಅದೂ ಇಲ್ಲ. ಕಾರಣ, ಚಿಗುರುವ ಮರಕ್ಕೆ ನೀರೆರೆದದರೆ ಫಲವುಂಟು. ಇಡಿಯ ಜೀವನದಲ್ಲಿ ಮಾಡಬಾರದ್ದನ್ನು ಮಾಡಿದ ವ್ಯಕ್ತಿಗೆ ಅದ್ಯಾವ ರೀತಿಯಲ್ಲಿ ಸಂಸ್ಕಾರ ಮಾಡಿದರೆ ಅದೇನು ತಾನೆ ಫಲ ಬರಲು ಸಾಧ್ಯ ? ಪತಿತರಿಗೆ ಮಾಡುವ ಸಂಸ್ಕಾರ ಹಣದ ವೆಚ್ಚವೇ ಹೊರತು, **"ದತ್ತಂ ಪುತ್ರಾದಿಬಂಧುಭಿಃ । ನ ಪ್ರಾಪ್ಯತೇ"** ಏನೂ ಉಪಯೋಗವಿಲ್ಲ.  ಇಷ್ಟು ಸಣ್ಣ ವಿಷಯವನ್ನು ಕಾಶಿಯಲ್ಲಿ ಓದಿಬಂದ ಪ್ರಾಣೇಶಾಚಾರ್ಯರಿಗೂ

ತಿಳಿಯದಂತೆ ಚಿತ್ರಿಸಿದ್ದು ಕಾದಂಬರಿಕಾರನ ಅಜ್ಞಾನವನ್ನು ಸೂಚಿಸುತ್ತದೆಯೇ ಹೊರತು ಮತ್ತೇನಲ್ಲ.

ಇದೆಲ್ಲ ಯಾಕೆ ಹೇಳಿದೆನೆಂದರೆ, ಬ್ರಾಹ್ಮಣರ ಸಂಸ್ಕಾರಪದ್ಧತಿಯನ್ನು ಆಡಿಕೊಳ್ಳುವದಕ್ಕಾಗಿಯೇ ಕಾದಂಬರಿ ಬರೆದ ಅನಂತಮೂರ್ತಿ ಅದೇ ಬ್ರಾಹ್ಮಣರ ಪದ್ಧತಿಯಲ್ಲಿಯೇ ತನ್ನ ಸಂಸ್ಕಾರವಾಗಬೇಕು ಎಂದು ಅಂತಿಮವಾಗಿ ಬಯಸಿದ್ದರು.

ದ್ವಂದ್ವನೀತಿಗೆ, ದ್ವಂದ್ವಜೀವನಕ್ಕೆ ಇದಕ್ಕಿಂತ ದೊಡ್ಡ ದೃಷ್ಟಾಂತ ಬೇಕಾ?

ಇಂತಹ ನಗೆಪಾಟಲಿನ ಬದುಕೂ ಒಂದು ಬದುಕಾ ?

ಇಂತಹ ದ್ವಂದ್ವನಿಲುವುಗಳ ಬುದ್ಧಿಹೀನ ಜೀವಿ-ಗಳನ್ನು ಕಂಡಾಗ ನೆನಪಾಗುವ ಶ್ಲೋಕ ಒಂದೇ —

**“ಕರ್ಮಣ್ಯೇಕಂ ವಚಸ್ಯೈಕಂ ಮನಸ್ಯೇಕಂ ಮಹಾತ್ಮನಾಮ್ ।**
**ಕರ್ಮಣ್ಯನ್ಯದ್ ವಚಸ್ಯನ್ಯದ್ ಮನಸ್ಯನ್ಯದ್ ದುರಾತ್ಮನಾಮ್”**

ನಿಮ್ಮ ಮನಸ್ಸಿನಲ್ಲಿ  ದೃಷ್ಟಾಂತದ ಸಮೇತವಾಗಿ ಇದರ ಅರ್ಥ ನಾಟಿ ಕುಳಿತಾಗಿದೆ. ಮತ್ತೆ ಹೇಳಬೇಕಾಗಿಲ್ಲ,

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491